**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದ. ಕ.,**
**ಮಂಗಳೂರು.**
**ಎಸ್. ಸಿ ಸಂಖ್ಯೆ: 130/ 2023**

ಪಿರ್ಯಾದುರಾರರುಃ (ಕರ್ನಾಟಕ ಸರ್ಕಾರದ ಪರವಾಗಿ)
ಉಳ್ಳಾಲ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : ಆ- 1 ಕಲಂದರ್ ಶಾಫಿ,
ತಂದೆ ಅಹಮ್ಮದ್ ( ಈ ಪ್ರಕರಣದಿಂದ ಬೇರ್ಪಟ್ಟಿರುತ್ತಾರೆ)

ಆ- 2 ಅಬ್ದುಲ್ ರಜಾಕ್ ಯಾನೆ ರಜಾಕ್,
ತಂದೆ ದಿಃ ಇದಿನಬ್ಬ, ಪ್ರಾಯ 51 ವರ್ಷ,
ವಾಸ ಪೀಸ್ ಹೋಮ್,
ಡೋರ್ ನಂ. 3- 10/ 3,
ಕೋಟೆಕಾರ್ ಪ್ರಾಥಮಿಕ ಆರೋಗ್ಯ ಕೇಂದ್ರ ಬಳಿ,
ಬೀರಿ, ಮಂಗಳೂರು.

**ದೋಷಾರೋಪಣೆ**

ಶ್ರೀಧರ್ ಗೋಪಾಲಕೃಷ್ಣ ಭಟ್, ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದ. ಕ. ಮಂಗಳೂರು, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆಪಾದನೆಗೆ ಗುರಿಪಡಿಸುತ್ತೇನೆ.

ಮೊದಲನೇಯದಾಗಿ, ದಿನಾಂಕ 22- 05- 2015 ರಂದು ರಾತ್ರಿ 11- 30 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1 ನೇ ಆರೋಪಿಯೊಂದಿಗೆ ಸೇರಿ ಕೋಟೆಕಾರು ಗ್ರಾಮದ ಬೀರಿ ಎಂಬಲ್ಲಿರುವ ಅಲಿಮಾ ಕಾಂಪೌಂಡಿನ ಒಂದನೇ ಮಹಡಿಯಲ್ಲಿರುವ ಚಾಸಾ- 1 ರವರ ವಾಸದ ಮನೆಗೆ ಸದರಿಯವರನ್ನು ಕೊಲೆ ಮಾಡುವ ಸಮಾನ

ಇಚ್ಛೆಯಿಂದ ಗಾಳಿ ಮರದ ದೊಣ್ಣೆಗಳನ್ನು ಹಿಡಿದುಕೊಂಡು ಒಳಗಡೆ ಚಿಲಕ ಹಾಕಿದ ಬಾಗಿಲನ್ನು ಬಲ ಪ್ರಯೋಗ ಮಾಡಿ ಚಿಲಕದ ಕೊಂಡಿಯನ್ನು ಮುರಿದು ಅಕ್ರಮ ಪ್ರವೇಶ ಮಾಡಿ, ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ 448 ಸಹವಾಚಿತ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1 ನೇ ಆರೋಪಿಯೊಂದಿಗೆ ಸೇರಿ ಚಾಸಾ-1 ರವರನ್ನು ಕೊಲ್ಲುವ ಸಮಾನ ಇಚ್ಛೆಯಿಂದ ಅಪಾಯಕಾರಿ ವಸ್ತುವಾದಂತಹ ಗಾಳಿ ಮರದ ದೊಣ್ಣೆಗಳಿಂದ ಸದರಿಯವರ ಹಣೆಯ ಬಲ ಬದಿಗೆ, ಎಡಕೈ ರಟ್ಟೆಗೆ, ಮಣಿಗಂಟಿಗೆ, ಎಡಕೈ ತಟ್ಟಿಗೆ, ಬಲಕೈ ರಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಮಾಡಿದ್ದು, ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ **324** ಸಹವಾಚಿತ ಕಲಂ **34** ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1 ನೇ ಆರೋಪಿಯೊಂದಿಗೆ ಸೇರಿ ಚಾಸಾ-1 ರವರನ್ನು ಕೊಲ್ಲುವ ಸಮಾನ ಉದ್ದೇಶದಿಂದ ಸ್ವಇಚ್ಛೆಯಿಂದ ಕೈಯಿಂದ ಚಾಸಾ-1ರವರ ಮುಖಕ್ಕೆ, ತುಟಿಗೆ ಹೊಡೆದು ಕೆಳಗೆ ಬೀಳಿಸಿ ನಂತರ ಕಾಲಿನಿಂದ ಹೊಟ್ಟೆಗೆ, ಎದೆಗೆ ಹಾಗೂ ಬೆನ್ನಿಗೆ ತುಳಿದು ನೋವುಂಟು ಮಾಡಿ, ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ **323 ಸಹವಾಚಿತ**

**ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1ನೇ ಆರೋಪಿಯೊಂದಿಗೆ ಸೇರಿ ಚಾಸಾ-1ರವರನ್ನು ಉದ್ದೇಶಿಸಿ ನಿನ್ನನ್ನು ನನ್ನ ತಮ್ಮನಿಗೆ ಮದುವೆ ಮಾಡಿಸಿದ ಮೇಲೆ ನನಗೆ ಮಾಟ ಮಾಡಿದಂತೆ ಆಗಿದೆ ಎಂಬುದಾಗಿ ಚುಚ್ಚು ಮಾತಿನಿಂದ ಮಾನಸಿಕ ಹಿಂಸೆ ನೀಡಿದ್ದು ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ 498-ಎ ಸಹವಾಚಿತ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1ನೇ ಆರೋಪಿಯೊಂದಿಗೆ ಸೇರಿ ಆ ರೀತಿ ಬೈದಲ್ಲಿ ಚಾಸಾ-1ರವರು ಉದ್ರೇಕಗೊಂಡು, ಅದರಿಂದ ಶಾಂತಿಭಂಗ ಉಂಟು ಮಾಡುವರೆಂದು ಅಥವಾ ಯಾವುದೇ ಅಪರಾಧ ಎಸಗುವರೆಂದು ಅಥವಾ ಹಾಗೆ ಆಗುವ ಸಂಭವ ಇದೆ ಎಂದು ತಿಳಿದು ಸಹ ಚಾಸಾ-1ರವರಿಗೆ " ನಿನ್ನನ್ನು ನನ್ನ ತಮ್ಮನಿಗೆ ಮದುವೆ ಮಾಡಿಸಿದ ಮೇಲೆ ನನಗೆ ಮಾಟ ಮಾಡಿದಂತೆ ಆಗಿದೆ" ಎಂಬುದಾಗಿ ಅವಾಚ್ಯ ಶಬ್ಧಗಳಿಂದ ಬೈದು ಅವಮಾನಿಸಿ ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಿತ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1ನೇ ಆರೋಪಿಯೊಂದಿಗೆ ಸೇರಿ ಚಾಸಾ-1ರವರನ್ನು ಕೊಲೆ ಮಾಡುವ ಸಮಾನ ಇಚ್ಛೆಯಿಂದ ಸದರಿಯವರನ್ನು ಉದ್ದೇಶಿಸಿ "ನಾನು ನಿನ್ನನ್ನು ಕೊಲ್ಲಲೆಂದೆ ಬಂದಿರುತ್ತೇವೆ. ಇದು ನಿನಗೆ ಸ್ಯಾಂಪಲ್, ನೀನು ಏನಾದರೂ ಪೊಲೀಸ್ ಕಂಪ್ಲೆಂಟ್ ಕೊಟ್ಟರೆ ಕೊಲ್ಲದೆ ಬಿಡುವುದಿಲ್ಲ'' ಎಂಬುದಾಗಿ ಸದರಿಯವರಿಗೆ ಕೊಲೆ ಬೆದರಿಕೆ ಹಾಕಿದ್ದು ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಿತ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1ನೇ ಆರೋಪಿಯೊಂದಿಗೆ ಸೇರಿ ಕೃತ್ಯವೆಸಗುವ ಸಮಾನ ಉದ್ದೇಶ ಹೊಂದಿ, ಚಾಸಾ-1ರವರು ಜೋರಾಗಿ ಬೊಬ್ಬೆ ಹೊಡೆದಾಗ ಆರೋಪಿಯಾದ ನೀವು ಚಾಸಾ-1ರವರ ಮಕ್ಕಳಾದ ಚಾಸಾ-2 ಅಯಿಷಾ ಲಿಫಾಂ ಮತ್ತು ಚಾಸಾ-3 ಫಾತಿಮಾ ಸಫಾರವರನ್ನು ಅಪಹರಣ ಮಾಡಲು ಯತ್ನಿಸಿ ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ 363 ಜೊತೆಗೆ 511 ಸಹವಾಚಿತ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಎಂಟನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಟ್ಟ 1ನೇ ಆರೋಪಿಯೊಂದಿಗೆ ಸೇರಿ ಕೃತ್ಯವೆಸಗುವ ಸಮಾನ ಇಚ್ಛೆಯಿಂದ ಚಾಸಾ-1ರವರನ್ನು ಕೊಲೆ ಮಾಡುವ ಉದ್ದೇಶದಿಂದ ಮತ್ತು ಆ

ರೀತಿ ಹಲ್ಲೆ ಮಾಡಿದಲ್ಲಿ ಚಾಸಾ-1ರವರು ಮೃತಪಡುತ್ತಾರೆ ಎಂದು ತಿಳಿದೂ ಸಹ ಅಪಾಯಕಾರಿ ವಸ್ತುವಾದ ಗಾಳಿ ಮರದ ದೊಣ್ಣೆಯಿಂದ ಚಾಸಾ-1ರವರ ಹಣೆಯ ಬಲ ಬದಿಗೆ, ಎಡಕೈ ರಟ್ಟೆಗೆ, ಮಣಿಗಂಟಿಗೆ, ಎಡಕೈ ತಟ್ಟೆಗೆ, ಬಲಕೈ ರಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನು ಮಾಡಿ ಚಾಸಾ-1ರವರನ್ನು ಕೊಲೆ ಮಾಡಲು ಪ್ರಯತ್ನಿಸಿದ್ದು, ಆ ನಿಮಿತ್ತದಿಂದ ಭಾರತೀಯ ದಂಡ ಸಂಹಿತೆಯ ಕಲಂ **307 ಸಹವಾಚಿತ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ.

ಮತ್ತು ಸದರಿ ಅಪರಾಧಗಳ ವಿಚಾರಣೆಯು ಈ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸುತ್ತೇನೆ.

**(ಶ್ರೀಧರ್ ಗೋಪಾಲಕೃಷ್ಣ ಭಟ್)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ. ಕ. ಮಂಗಳೂರು.

ದಿನಾಂಕಃ 29. 07. 2026

ಪ್ರ. ನಂಬ್ರ 1 ಈಗ ಓದಿ ಹೇಳಿ ವಿವರಿಸಿದ ಪ್ರಕರಣದಡಿಯಲ್ಲಿ ಶಿಕ್ಷಾರ್ಹವಾದ ಅಪರಾಧದ ದೋಷಾರೋಪಣೆಯನ್ನು ಕೇಳಿರುವಿರಲ್ಲವೇ?

ಉತ್ತರಃ

ಪ್ರ. ನಂಬ್ರ- 2 ದೋಷಾರೋಪಣ ತಪ್ಪು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ

( ಮೇಲ್ಕಡ ದೋಷಾರೋಪಣೆಗೆ ಆರೋಪಿ ಕೊಟ್ಟ ಉತ್ತರವನ್ನು ನಾನು ಸರಿಯಾಗಿ ಕೇಳಿ ಬರೆದಿರುತ್ತೇನೆ ಎಂದು ದೃಢೀಕರಿಸುತ್ತೇನೆ. )

ದಿನಾಂಕಃ 29. 07. 2026

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ. ಕ. , ಮಂಗಳೂರು.